SRI G. B. SHANKAR RAO.—Mr. Speaker, those details are not that important. If the Hon. member puts a separate question for that I will answer.

ಶ್ರೀ ಪಿ. ರಾಮದೇವ್.—೧೯೭೯ ರಿಂದ ೧೯೮೨ರವರೆಗೆ ಸುಮಾರು ೧೭ ಬಾಸಗಿ ವಿದ್ಯಾ ಸಂಸ್ಥೆಗಳಿಗೆ ಅನುಮತಿ ನೀಡಿದ್ದೀರಿ, ಈ ಸಂಸ್ಥೆಗಳಿಗೆ ಜಾಗವನ್ನು ನೀಡಿ. ಹೆತ್ತೋಟಿ ಇರಬೇಕಾದರೆ ಪ್ರೊಫೆಸರ್ ಪಿ. ಸಿ. ದೇವೇಗೌಡರ ಒಂದು ಸಮಿತಿಯನ್ನು ಮಾಡಿದ್ದೀರಿ. ಆ ಸಮಿತಿಯವರು ತಮಗೆ ರಿಪೋರ್ಟ್ ಕೊಟ್ಟಿದ್ದಾರೆ. ತಾವು ಆ ವರದಿಯನ್ನು ಸಭೆಗೆ ಯಾಕೆ ಇದುವರೆಗೆ ಇಡುತ್ತೇವೆಂದು ಭರವಸೆ ಕೊಟ್ಟಿದ್ದಿರಿ, ಇದುವರೆಗೂ ಇಟ್ಟಿಲ್ಲ, ಅದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಜಿ. ಬಿ. ಶಂಕರರಾವ್.—ಇದು ವಿದ್ಯಾ ಸಂಸ್ಥೆಗಳು ಪ್ರಾರಂಭಿಸುವ ಬಗ್ಗೆ ಪ್ರಶ್ನೆ ಇದೆ, ಸಮಿತಿ ವಿಚಾರ ಬೇರೆ, ಅದಕ್ಕೆ ಮತ್ತೊಂದು ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ರಾಜಾ ಆಂಜಿನ್ನ ನಾಯಕ.—೧೯೮೧-೮೨ ರಲ್ಲಿ ಕೆಲವು ಮಂದಾ ವಿದ್ಯಾಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ ಎಂಬ ವಿಷಯ ತಿಳಿದುಬಂದಿದೆ. ಆದರೆ ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ. ಆದರೆ ಎಷ್ಟು ಪೂರ್ಣವಿದ್ಯಾಲಯಗಳಿಗೆ ಮಂಜೂರಾತಿ ಕೊಡಲಾಗಿದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ವಿಶೇಷ ಮಾಹಿತಿ ಇದ್ದರೆ ಇನ್ನೊಂದು ಪ್ರಶ್ನೆ ಕೇಳಲಿ.

Constitution of C. I. T. B. for Mandya Town

662. SRI M. S. ATMANANDA (Mandya).—Will the Minister for Housing and Urban Development be pleased to state.—

(a) Whether it has come to the notice of the Government about the very fast development of Mandya town;

(b) if so, whether Government intended to establish a City Improvement Trust Board at Mandya?

SRI DHARAM SINGH (Minister for Housing & Urban Development).—

(a) Yes.

(b) Yes, the City Improvement Trust Board was established on 1-8-1980

ಶ್ರೀ ಎಂ. ಎಸ್. ಆತ್ಮಾನಂದ.—ಈ ನಗರಾಭಿವೃದ್ಧಿ ಮಂಡಳಿ ಸ್ಥಾಪಿತವಾಗಿ ಒಂದು ಒಂದೂವರೆ ವರ್ಷವಾಯಿತು; ಈ ಮಂಡಲಿ ಮಂಡ್ಯ ನಗರದ ಅಭಿವೃದ್ಧಿ ಕಡೆ ಏನೇನು ಕಾರ್ಯಕ್ರಮ ಇದುವರೆಗೆ ಮಾಡಿದೆ ಎಂದು ಕೇಳಬಯಸುತ್ತೇನೆ

ಶ್ರೀ ಧರ್ಮಸಿಂಗ್.—ತಾವು ನಗರಾಭಿವೃದ್ಧಿ ಮಂಡಲಿಯನ್ನು ಮಾಡಿದೆಯೇ ಎಂದು ಕೇಳಿದ್ದೀರಿ, ಮಾಡಿದೆ ಎಂದು ಹೇಳಿದ್ದೇನೆ. ಇಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಪಾಪುಲೇಷನ್ ಇದೆ. ಎಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇದೆಯೋ ಅಲ್ಲಿ ವ್ಯವಸ್ಥಿತವಾಗಿ ನಗರವನ್ನು ಬೆಳಸಲಿಕ್ಕೆ ನಗರಾಭಿವೃದ್ಧಿ ಮಂಡಲಿಯನ್ನು ರಚನೆ ಮಾಡುತ್ತಾ ಇದ್ದೇವೆ. ಇಲ್ಲಿ ಸ್ಲಾಫ್ ಕೂಡ ಸ್ಯಾಂಕ್ಷನ್ ಮಾಡಿದ್ದೇವೆ. ಡಿ. ಸಿ. ಆಫೀಸಿಗೆ ಅಧಿಕಾರ ಕೊಡುತ್ತಾ ಇದ್ದೇವೆ. ಮತ್ತೆ ಸ್ಕೀಂ ಕೂಡ ಪ್ರಿಪೇರ್ ಮಾಡುತ್ತಾ ಇದ್ದೇವೆ. ಇದುವರೆಗೆ ಟಾಗಿ ಸಾನ್ ಆಫೀಸರ್, ಫೋರ್‌ಮನ್‌ರನ್ನೂ ಕೂಡ ಹಾಕುತ್ತಾ ಇದ್ದೇವೆ. ಆದಾದ ನಂತರ ಸ್ವಲ್ಪ ತೀವ್ರಗತಿಯಿಂದ ಕೆಲಸ ಆಗುವುದೆ.

ಶ್ರೀ ಎಂ. ಎಸ್. ಆತ್ಮಾನಂದ.—ಬೇರೆ ನಗರಗಳಲ್ಲಿ ಇರುವ ಹಾಗೆ ನಮ್ಮ ಮಂಡ್ಯ ನಗರಕ್ಕೂ ಪ್ಲಾನಿಂಗ್ ಅಥಾರಿಟಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಧರ್ಮಸಿಂಗ್.—ಪ್ಲಾನಿಂಗ್ ಅಥಾರಿಟಿ ಕೂಡ ಮಂಡ್ಯದಲ್ಲಿ ಮಾಡಿದೆ.